e) Yes.

f) To constitute Special Courts, karnataka Land Grabbing (Prohibition) Act, 2007 has been approved by both the Houses and it will come in to force shortly.

853. ಶ್ರೀ ಗೋಪಾಲ ಪೂಜಾರಿ (ಬೈಂದೂರು) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಸರ್ಕಾರಿ ಭೂಮಿಗಳಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡಿರುವುದನ್ನು ಸಕ್ರಮ ಮಾಡಲು 2000ನೇ ಇಸವಿಯಲ್ಲಿ ಅರ್ಜಿಗಳನ್ನು ಕರೆದಿದ್ದು ಕೆಲವರಿಗೆ ಈ ಮಾಹಿತಿ ತಿಳಿಯದೆ ಸಕಾಲದಲ್ಲಿ ಅರ್ಜಿಗಳನ್ನು ಹಾಕಿಕೊಂಡಿರುವುದಿಲ್ಲ. ಆದ್ದರಿಂದ ಅನ್ಯಾಯಕ್ಕೊಳಗಾದ ಬಡವರಿಗೆ ಹಾಲಿ ಮನೆ ಕಟ್ಟಿಕೊಂಡಿದ್ದರೆ ಸಕ್ರಮ ಮಾಡಲು ಅವಕಾಶವಿದೆಯೇ;

(ಆ) ಹಾಗಿಲ್ಲದಿದ್ದಲ್ಲಿ ಇವರಿಗೆ ಯಾವ ರೀತಿ ಪರ್ಯಾಯ ವ್ಯವಸ್ಥೆ ಮಾಡಲಾಗುವುದು;

(ಇ) ಬೆಂಗಳೂರು ಸುತ್ತಮುತ್ತ ಸಣ್ಣರೈತರು ಫಾರಂ ನಂ.53ನ್ನು ನಿಗದಿತ ಸಮಯದಲ್ಲಿ ಅರ್ಜಿ ಹಾಕಿಕೊಂಡಿದ್ದರೂ ಸುಮಾರು 30 ವರ್ಷಗಳಿಗಿಂತಲೂ ಹೆಚ್ಚು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ಸಣ್ಣ ರೈತರ ತುಂಡು ಭೂಮಿಗಳು ಅಂದರೆ 1 ರಿಂದ 15 ಗುಂಟೆ ಜಮೀನನ್ನು ಸಣ್ಣ ರೈತರಿಗೆ ಮಾರುಕಟ್ಟೆ ಬೆಲೆಗಿಂತ 1/2 ದಷ್ಟು ದಂಡ ಹಾಕಿ ಅವರಿಗೆ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಕರ್ನಾಟಕ ಭೂ ಸ್ವಾಧೀನತೆಯಲ್ಲಿನ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1999ಕ್ಕೆ ಸರ್ಕಾರದ ಅಧಿಸೂಚನೆ ಸಂ: ಆರ್ ಡಿ 57 ಎಲ್‌ಜಿಪಿ 98(ಪಿ1) ದಿ: 31.01.2001ರಲ್ಲಿ ತಂದ ತಿದ್ದುಪಡಿ ನಿಯಮಗಳನ್ವಯ ದಿ: 01.04.2001ಕ್ಕೆ ಮೊದಲು ಅರ್ಜಿ ಸಲ್ಲಿಸಿದ್ದಲ್ಲಿ ಸಕ್ರಮ ಮಾಡಲು ಅವಕಾಶ ಕಲ್ಪಿಸಲಾಗಿದೆ.

(ಅ) ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

(ಇ) ಇಲ್ಲ.

(ಈ) ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

413. ಶ್ರೀ ಸೋಮಣ್ಣ ವಿ. (ಬನ್ನಿಪೇಟೆ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2006ರಿಂದ ಇಲ್ಲಿಯವರೆಗೆ ಬೆಂಗಳೂರು ಸುತ್ತಮುತ್ತ ಎಷ್ಟು ಎಕರೆ ಒತ್ತುವರಿ ಭೂಮಿಯನ್ನು ತೆರವುಗೊಳಿಸಿ ಸ್ವಾಧೀನಪಡಿಸಿಕೊಳ್ಳಲಾಗಿದೆ;

(ಆ) ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯಲ್ಲಿ ಎಷ್ಟು ಎಕರೆ ಭೂಮಿಯನ್ನು ಹರಾಜು ಮಾಡಲಾಗಿದೆ ಹಾಗೂ ಅದರಿಂದ ಬಂದ ಹಣವೆಷ್ಟು;

(ಇ) ಈ ರೀತಿ ಸ್ವಾಧೀನಪಡಿಸಿಕೊಳ್ಳಲಾದ ಜಾಗಗಳಲ್ಲಿ ನಿವೇಶನಗಳನ್ನು ನಿರ್ಮಿಸಿ ಬಡರಿಗೆ ಹಂಚಿಕೆ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಬೆಂಗಳೂರು ಸುತ್ತಮುತ್ತ 8924–22 ಎಕರೆ ಜಮೀನನ್ನು ತೆರವುಗೊಳಿಸಿ ಸ್ವಾಧೀನಪಡಿಸಿಕೊಳ್ಳಲಾಗಿದೆ.

(ಆ) ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ಪೈಕಿ 1183–06 ಎಕರೆ ಹರಾಜು ಮಾಡಲಾಗಿದ್ದು, ಈ ಪೈಕಿ ಸರ್ಕಾರದಿಂದ 297 ಎಕರೆ ಮಾತ್ರ ಸ್ಥಿರೀಕರಣಗೊಂಡಿದೆ.

ಈ ಹರಾಜಿನಿಂದ ಒಟ್ಟು ಮೊತ್ತ ರೂ. 311.ಕೋಟಿ ಹಣ ಅಂತಿಮ ಬಿಡ್‌ನಲ್ಲಿ ದೊರೆತಿದ್ದು ಈ ಪೈಕಿ ರೂ. 199.33 ಕೋಟಿ ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಿದೆ. ಈ ಮಧ್ಯೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ ಹರಾಜಿನ ಸ್ಥಿರೀಕರಣವು ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಅಂತಿಮ ನಿರ್ಣಯ ಷರತ್ತಿಗೆ ಒಳಪಟ್ಟಿದೆ ಎಂದು ಆದೇಶ ನೀಡಿದೆ. ಆದ್ದರಿಂದ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇ ಆದ ತಕ್ಷಣ ಬಾಕಿ ಮೊತ್ತ ರೂ. 111.67 ಕೋಟಿಯನ್ನು ವಸೂಲಿ ಮಾಡಲಾಗುವುದು.